# ಎಂಥಾ ಚೆಲುವಗೆ ಮಗಳನು ಕೊಟ್ಟನು

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
4. **Note:** The wordings in the book in Ref. 2 and Ref. 3 are fully matching and the singer has followed these lyrics. There are minor differences in wordings as per in Ref. 1 and are given separately in yellow highlights.
5. **Note:** The Ankita is different in these books. We have considered book in Ref.2 as standard and taken that Ankita for listing.

ರಾಗ ನಾದನಾಮಕ್ರಿಯೆ ತಾಳ ಆದಿ

ಎಂಥಾ ಚೆಲುವಗೆ ಮಗಳನು ಕೊಟ್ಟನು
ಗಿರಿ ರಾಜನು ನೋಡಮ್ಮಮ್ಮಾ || ಪ ||

ಕಂತುಹರ ಶಿವ ಚೆಲುವನೆನ್ನುತ
ಮೆಚ್ಚಿದನು ನೋಡಮ್ಮಮ್ಮಾ || ಅಪ ||

ಮೋರೆ ಐದು ಮೂರು ಕಣ್ಣು
ವಿಪರೀತವ ನೋಡಮ್ಮಮ್ಮಾ
ಕೊರಳೊಳು ರುಂಡಮಾಲೆಯ
ಧರಿಸಿದ ಉರಗ ಭೂಷಣನ ನೋಡಮ್ಮಮ್ಮಾ || ೧ ||

ತಲೆಯೊಂಬೋದು ನೋಡಿದರೆ ಜಡೆ
ಹೊಳೆಯುತಿದೆ ನೋಡಮ್ಮಮ್ಮಾ
ಹಲವು ಕಾಲದ ತಪಸಿ ರುದ್ರನ
ಮೈ ಬೂದಿಯ ನೋಡಮ್ಮಮ್ಮಾ || ೨ ||

ಭೂತ ಪ್ರೇತ ಪಿಶಾಚಿಗಳೆಲ್ಲ
ಪರಿವಾರವು ನೋಡಮ್ಮಮ್ಮಾ
ಈತನ ನಾಮವು ಒಂದೇ ಮಂಗಳ
ಮುಪ್ಪುರ ಹರನ ನೋಡಮ್ಮಮ್ಮಾ || ೩ ||

ರಾಗ ಶಂಕರಾಭರಣ ತಾಳ ಆದಿ

ಎಂಥಾ ಚೆಲುವಗೆ ಮಗಳನು ಕೊಟ್ಟನು
ಗಿರಿ ರಾಜನು ನೋಡಮ್ಮಮ್ಮಾ

ಕಂತುಹರ ಶಿವ ಚೆಲುವನೆನ್ನುತ
ಮೆಚ್ಚಿದನೇ ನೋಡಮ್ಮಮ್ಮಾ

ಮನೆಯೆಂಬುದು ಸ್ಮಶಾನವು ನೋಡೆ
ಗಜ ಚರ್ಮಾಂಬರವಮ್ಮಮ್ಮಾ
ಹಣವೊಂದೆಂಬುದು ಕೈಯೊಳಗಿಲ್ಲವು
ಕಪ್ಪರವಿದೆ ನೋಡಮ್ಮಮ್ಮಾ

ಮೋರೆಗಳ್ ಐದು ಮೂರು ಕಣ್ಣುಗಳು
ವಿಪರೀತವ ನೋಡಮ್ಮಮ್ಮಾ
ಘೋರವಾದ ರುಂಡಮಾಲೆ
ಉರಗ ಭೂಷಣವನು ನೋಡಮ್ಮಮ್ಮಾ

ಭೂತ ಪ್ರೇತ ಪಿಶಾಚಿಗಳೆಲ್ಲಾ
ಪರಿವಾರವು ನೋಡಮ್ಮಮ್ಮಾ
ಈತನ ನಾಮವು ಒಂದೇ ಮಂಗಳಕರವು
ಹರನ ನೋಡಮ್ಮಮ್ಮಾ

ಮನೆಯೆಂಬುವುದು ಸ್ಮಶಾನವು ನೋಡೆ
ಗಜ ಚರ್ಮಾಂಬರವಮ್ಮಮ್ಮಾ
ಹಣವೊಂದಾದರು ಕೈಯೊಳಗಿಲ್ಲ
ಕಪ್ಪರವನು ನೋಡಮ್ಮಮ್ಮಾ || ೪ ||

ತಲೆ ಎಂಬುದು ನೋಡಿದರೆ ಜಡೆಯು
ಹೊಳೆಯುತಿದೆ ನೋಡಮ್ಮಮ್ಮಾ
ಹಲವು ಕಾಲದ ತಪಸಿ ರುದ್ರನ
ಮೈ ಬೂದಿಯ ನೋಡಮ್ಮಮ್ಮಾ

ನಂದಿ ವಾಹನನ ನೀಲಕಂಠನ
ನಿರ್ಗುಣನ ನೋಡಮ್ಮಮ್ಮಾ
ಇಂದಿರೆ ರಮಣ ಶ್ರೀ ಪುರಂದರ ವಿಠಲನ
ಪೊಂದಿದವನ ನೋಡಮ್ಮಮ್ಮಾ || ೫ ||

ನಂದಿ ವಾಹನನ ನೀಲಕಂಠನ
ನಿರ್ಗುಣನನು ನೋಡಮ್ಮಮ್ಮಾ
ಇಂದಿರೆ ರಮಣನ ಪುರಂದರ ವಿಠಲನ
ಹೊಂದಿದವನ ನೋಡಮ್ಮಮ್ಮಾ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಹಾಡಿನಲ್ಲಿ ಭಾಗವತೋತ್ತಮನಾದ ಶಿವನನ್ನು ನಿಂದಾಸ್ತುತಿಯ ರೀತಿಯಲ್ಲಿ ದಾಸರು ಬಣ್ಣಿಸಿದ್ದಾರೆ.

**ಗಿರಿರಾಜ** = ಹಿಮವಂತ ರಾಜ (ಇವನಿಗೆ ಪರ್ವತರಾಜನೆಂಬ ಹೆಸರೂ ಇದೆ.  ಇವನ ಹೆಂಡತಿ ಮೇನಾ.  ಇವರ ಮಗಳು ಪಾರ್ವತಿ.  ಪೂರ್ವ ಜನ್ಮದ ದಾಕ್ಷಾಯಣಿ ಇಲ್ಲಿ ಪಾರ್ವತಿಯಾಗಿ ಹುಟ್ಟಿ ಬಂದು ಶಿವನನ್ನು ಕುರಿತು ತಪಸ್ಸು ಮಾಡಿ, ಅವನನ್ನು ವರಿಸಿದ ಕಥೆ).

**ಕಂತುಹರ** = ಕಾಮನನ್ನು ಸಂಹರಿಸಿದವ, ಶಿವ

**ಗಜ ಚರ್ಮಾಂಬರ** = ಗಜ ಚರ್ಮವನ್ನು ಹೊದ್ದವ.  (ಗಜಾಸುರನು ಮಹಿಷಾಸುರನ ಮಗ.  ಶಿವನನ್ನು ಕುರಿತು ತಪಸ್ಸು ಮಾಡಿ ವರಗಳನ್ನು ಪಡೆದು ದೇವತೆಗಳನ್ನು ಪೀಡಿಸುತ್ತಿದ್ದನು.  ಕೊನೆಗೆ ಶಂಕರನು ತ್ರಿಶೂಲದಿಂದ ಅವನನ್ನು ಕೊಂದು, ಅವನ ಬೇಡಿಕೆಯಂತೆ ಅವನ ಚರ್ಮವನ್ನು ತಾನು ಹೊದ್ದುಕೊಂಡನು).

**ಕಪ್ಪರ** = ಕಮಂಡಲು; ಬ್ರಹ್ಮನ ಐದನೆಯ ತಲೆಯ ಪರಟೆ.

**Classification:** Keerthane
**Ankita:** sri purandara vittala
**Location:** NA
**Category:** Shiva Stuti
**Group Words:** shiva, raja, kannu, gaja, rokka, kai, uraga, tapa, mangala,
**Pravachana:** Kallapur Pavamanachar
**Explanation:** NA